ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಭಿನ್ನವಿಸಿಕೊಳ್ಳುತ್ತೇನೆ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಧೇಯಕವನ್ನು ಸದನದಲ್ಲಿ ಅಂಗೀಕಾರಕ್ಕೆ ತೆಗೆದುಕೊಳ್ಳಬೇಕು ಎನ್ನತಕ್ಕಂಥ ವಿಷಯವನ್ನು ನಾವು ಪ್ರಸ್ತಾಪ ಮಾಡಿದೆವು. ಆದರೆ ಅದು ಅಜೆಂಡಾದಲ್ಲಿ ಬರದೇ ಇದ್ದ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ವಿಶೇಷವಾಗಿ ಇದನ್ನು ನಮೂದಿಸಿ ನಮಗೆ ಈ ವಿಧೇಯಕವನ್ನು ಸದನದಲ್ಲಿ ಮಂಡಿಸಲು ವಿಶೇಷವಾದ ಅವಕಾಶವನ್ನು ಕಲ್ಪಿಸಿಕೊಟ್ಟರು. ಅದಾದ ನಂತರ ಈ ದಿವಸವೇ ಪರ್ಯಾಲೋಚನೆಗೆ ಅವಕಾಶ ಮಾಡಿಕೊಡಬೇಕೆಂದು ಈ ವಿಧೇಯಕವನ್ನು ಬೆಳಿಗ್ಗೆಯೇ ಇಲ್ಲಿ ಮಂಡಿಸಲಾಯಿತು. ಈಗ ಅದು ಪರ್ಯಾಲೋಚನಾ ಹಂತಕ್ಕೆ ಬಂದಿದೆ. 14ನೇ ತಾರೀಖಿನೊಳಗಾಗಿ ಮುಖ್ಯವಾದ ಈ ವಿಧೇಯಕವನ್ನು ನಾವಿಲ್ಲಿ ಅಂಗೀಕರಿಸಲೇಬೇಕಾಗಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಒಂದು ಕಡೆ ನಾವು ಬೇಗ ಹೋಗಬೇಕು ಎಂದು ಹೇಳಿ ನಮ್ಮ ಹಕ್ಕನ್ನು ಮೊಟಕುಗೊಳಿಸುತ್ತೀರಿ.

ಉಪಾಧ್ಯಕ್ಷರು : ನಾವು ಕುಳಿತುಕೊಳ್ಳಲಿಕ್ಕೆ ತಯಾರಿದ್ದೇವೆ. ನೀವು ಮತ್ತು ಪತ್ರಕರ್ತರು ಇದಕ್ಕೆ ತಯಾರಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನಂತೂ ನೀವೆಲ್ಲಾ ಬರುವುದಕ್ಕೆ ಮಂಚೆಯೇ ಅಂದರೆ ಬೆಳಿಗ್ಗೆ 9 ಗಂಟೆಗೇ ವಿಧಾನ ಸೌಧಕ್ಕೆ ಬಂದು ರಾತ್ರಿ 9 ಗಂಟೆಗೆ ವಾಪಸ್ ಹೋಗುತ್ತೇನೆ. ತಾವೆಲ್ಲರೂ ಅಟ್‌ಲೀಸ್ಟ್ ಅಲ್ಲಿ ಇಲ್ಲಿ ರೆಸ್ಟ್ ತೆಗೆದುಕೊಳ್ಳುತ್ತಿರುತ್ತೀರಿ...

(ಗೊಂದಲ)

(ಅಧ್ಯಕ್ಷರ ಆಪ್ತಣೆ ಮೇರೆಗೆ ಚರ್ಚೆ)

ರಾಜ್ಯದಲ್ಲಿ ಜಿಲ್ಲೆಗಳ ಪುನರ್ ವಿಂಗಡಣೆ ಕುರಿತು

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ದಿವಸ ಸಾಯಂಕಾಲ 4 ಗಂಟೆಗೆ ಪ್ರಶ್ನೋತ್ತರ ತೆಗೆದುಕೊಂಡರೂ ನಾವು ಇತರ ಕಾರ್ಯಕಲಾಪಗಳನ್ನು ನಡೆಸಿಕೊಟ್ಟಿದ್ದೇವೆ. ಮಾನ್ಯ ಉಪಾಧ್ಯಕ್ಷರೇ, ಈಗ ಏನಾಗಿದೆ ಅಂದರೆ, ಹೊನ್ನಾಳಿ ತಾಲ್ಲೂಕು ದಾವಣಗೆರೆಗೆ ಸೇರುವುದು ಬೇಡ, ಅದು ಶಿವಮೊಗ್ಗ ಜಿಲ್ಲೆಯಲ್ಲೇ ಇರಲಿ ಎಂದು ಗಲಾಟೆಗಳಾಗಿ ....

6.40 ಪಿಎಂ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ಜಿಲ್ಲಾ ವಿಂಗಡಣೆ ಮಾಡುವುದಕ್ಕೆ ನಿಮ್ಮಿಂದ ಏನಾದರೂ ವಿರೋಧ ಇದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ವಿರೋಧ ಇಲ್ಲ. ನಾವು ಜಿಲ್ಲಾ ವಿಂಗಡಣೆಗೆ ರೆಡಿ ಇದ್ದೇವೆ. ನಾವು ವಿರೋಧ ಮಾಡುತ್ತಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಅವರು ಏನು ಕಾರಣ ಹೇಳಿದರೆಂದರೆ, ಇದನ್ನು 15ನೇ ತಾರೀಖು ಅನೌನ್ಸ್ ಮಾಡುತ್ತಾ ಇರುವುದರಿಂದ ಅದರ ತತ್‌ಪರಿಣಾಮವಾಗಿ ಈ ಒಂದು ಸಮಸ್ಯೆ ಉದ್ಭವಿಸುತ್ತದೆ. ಅದಕ್ಕೆ ಈಗ ಅದನ್ನು ಕೌನ್ಸಿಲ್‌ಗೆ ಕಳುಹಿಸಿ ಅಲ್ಲಿಂದ ಅಸೆಂಬ್ಲಿಗೆ ಕಳುಹಿಸಬೇಕು. If you are not opposing it, then why not ನಿಮಗೆ ಇದರ ಬಗ್ಗೆ ಅಬ್ಜೆಕ್ಷನ್ ಇದ್ದರೆ I would have understood that.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ ಇದು ಒಂದೇ ಅಲ್ಲ, ಸೆಕ್ಷನ್ 38ಗೆ ಅಮೆಂಡ್‌ಮೆಂಟ್ ಮಾಡುವಂಥದ್ದು ಇದೆ. ಇಂಥ ಕೆಲವು ಅಮೆಂಡ್‌ಮೆಂಟ್ ತರುವಂಥದ್ದಕ್ಕೆ ಕೊನೆಯ ಪಕ್ಷ ಅದನ್ನು ನೋಡಿ ಅದರ ಬಗ್ಗೆ ನಾವು ಸ್ವಲ್ಪವಾದರೂ ಮಾತನಾಡುವಂಥದ್ದು ಇರುವುದಿಲ್ಲವೇ? ಇದರ ಬಗ್ಗೆ ಮಾತನಾಡುವುದಕ್ಕೆ ಸಮಯ ಬೇಕಲ್ಲವೇ? ಅವುಗಳ ಬಗ್ಗೆ ಮಿನಿಮಮ್ ಅಂದರೆ ಅರ್ಧ ಗಂಟೆಯಾದರೂ ಮಾತನಾಡುವುದಕ್ಕೆ ಬೇಡವೇ? ಅವರೂ ಸಹ ಮಾತನಾಡುವುದಕ್ಕೆ 15-20 ನಿಮಿಷ ಬೇಕಾಗುತ್ತದೆ.

SRI. J.H. PATEL : You can point out anything.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಪಂಚಾಯತ್‌ರಾಜ್ ವಿಧೇಯಕವನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ ಈಗ ಸದನವನ್ನು ನಾಳೆಗೆ ಮುಂದೂಡಿ ನಾಳೆ ಬೆಳಿಗ್ಗೆ ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ ಈ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಿ. ಆ ಮೇಲೆ ಬೇಕಾದರೆ ನಮ್ಮದೇನಾದರೂ ಬೇರೆ ವಿಷಯಗಳು ಇದ್ದರೆ ಪ್ರಸ್ತಾಪ ಮಾಡುತ್ತೇವೆ. ಈಗ ಕನಿಷ್ಠ ಪಕ್ಷ ಈ ನಿಲುವಳಿ ಸೂಚನೆಯನ್ನಾದರೂ ಚರ್ಚೆಗೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು : ತಾವು ದಯಮಾಡಿ ಕೇಳಬೇಕು, ತಾವು ತಂದಿರುವ ನಿಲುವಳಿ ಸೂಚನೆಯನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ ಎಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಅದಕ್ಕೆ ತಾವು ಸಹಕಾರ ನೀಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನೀವು ಏಕೆ ವಿಷಯವನ್ನು ಐದು ನಿಮಿಷದಲ್ಲಿ ಚರ್ಚೆ ಮಾಡಿ ಮುಗಿಸುತ್ತೇವೆಂದು ಹೇಳಿದಿರಿ?

ಉಪಾಧ್ಯಕ್ಷರು : ಇದು ಐದು ನಿಮಿಷದಲ್ಲಿ ಮುಗಿಯುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆ ನಾನು ಇಷ್ಟು ಒತ್ತಾಯ ಮಾಡುತ್ತಿದ್ದೇನೆ ಎಂದರೆ ಸುಳ್ಯದಲ್ಲಿ ಗಲಾಟೆ ಆಗಿದೆ. ಪುತ್ತೂರಿನಲ್ಲಿ ಇದೇ ಗಲಾಟೆ ಮುಂದುವರಿಯುತ್ತಿದೆ, ಇವತ್ತು ವಿಟ್ಲದಲ್ಲಿ ಸಹ ಗಲಾಟೆ ಆಗಿದೆ.

ಉಪಾಧ್ಯಕ್ಷರು : ಮಾನ್ಯ ಖರ್ಗೆಯವರೆ, ಈಗ ಗಮನ ಸೆಳೆಯುವ ಸೂಚನೆಗಳು ಎರಡು ಇವೆ. ಅವುಗಳನ್ನು ಈಗ ಚರ್ಚೆಗೆ ತೆಗೆದುಕೊಂಡು ನಂತರ ಸದನವನ್ನು ನಾಳೆಗೆ ಮುಂದೂಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಇದನ್ನು ನಾಳೆ ನೀವು ಚರ್ಚೆಗೆ ತೆಗೆದುಕೊಳ್ಳುವುದಾದರೆ ಈಗ ಸದನವನ್ನು ಮುಂದೂಡವುದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಉಪಾಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ನಾಳೆ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಬಾಯಿಬಿಟ್ಟು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಸಣ್ಣದೊಂದು ತಿದ್ದುಪಡಿ ಇದೆ. ನಾಳೆ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕದ ತಿದ್ದುಪಡಿಯ ಪರ್ಯಾಲೋಚನೆ ಆದಮೇಲೆ ಪ್ರಶ್ನೊತ್ತರವನ್ನು ತೆಗೆದುಕೊಳ್ಳೋಣ.

(ಗೊಂದಲ)

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ. ಖರ್ಗೆಯವರೇ, ನೀವೂ ನಿಂತಿದ್ದೀರಿ, ಮಾನ್ಯ ಯಡಿಯೂರಪ್ಪನವರೂ ನಿಂತಿದ್ದಾರೆ. ಹೀಗಾದರೆ ಇನ್ನು ನಾವು ಏನು ಮಾಡಭೇಕು? ಒಂದೇ ಸಲಕ್ಕೆ ಇಬ್ಬರೂ ನಿಂತು ಮಾತನಾಡಿದರೆ ಹೇಗೆ? ಯಾರಾದರು ಒಬ್ಬರು ನಿಂತು ಮಾತನಾಡಿದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರದ ಕಡೆಯಿಂದ ಉತ್ತರ ಕೊಡಿಸಬಹುದು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, 3-4 ಕಡೆ ಘಟನೆಗಳು ನಡೆದಿರುವ ಬಗ್ಗೆ ವಿವರವಾದ ವರದಿಯನ್ನು ನಾಳೆ ಮಾನ್ಯ ಅಧ್ಯಕ್ಷರ ಸಮ್ಮುಖದಲ್ಲಿಯೇ ಕೊಡುತ್ತೇವೆ. ಆದರೆ ಕೆಲವು ಕಡೆಯಿಂದ ಏನು ಆಗಿದೆ ಎಂಬುದಕ್ಕೆ ಇನ್ನೂ ಪೂರ್ಣ ವರದಿ ಬಂದಿಲ್ಲ.

ಉಪಾಧ್ಯಕ್ಷರು : ಕೆಲವು ಕಡೆಯಿಂದ ಇನ್ನೂ ಪೂರ್ಣ ವರದಿ ಬಂದಿಲ್ಲವೆಂದು ಹೇಳಿದ ಮೇಲೆ ಅವರು ಏನು ಉತ್ತರ ಕೊಡುವುದಕ್ಕಾಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ವಿಧೇಯಕದ ಬಗ್ಗೆ ಚರ್ಚೆ ಮುಗಿದ ಮೇಲೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಇದು ಆಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಬಹಳ ವರ್ಷಗಳಿಂದ ಪೆಂಡಿಂಗ್ ಇದ್ದಂಥ ಜಲ್ಲೆಗಳನ್ನು ಪುನರ್‌ವಿಂಗಡಣೆ ಮಾಡಿ ಐತಿಹಾಸಿಕವಾದಂಥ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡಿದ್ದಾರೆ. ನಾವು ಅದಕ್ಕೆ ಅಭಿನಂತನೆಯನ್ನು ಸಲ್ಲಿಸುತ್ತೇವೆ. ಅದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಈ ನೆಪದಲ್ಲಿ ಕೆಲವು ತಾಲ್ಲೂಕುಗಳು ಎಲ್ಲಿ ಯಾವ ಜಿಲ್ಲೆಗೆ ಸೇರಬೇಕು ಎನ್ನುವ ಗೊಂದಲ ಉಂಟಾಗಿ ತಮಗೆ ಗೊತ್ತಿರುವ ಹಾಗೆ ಹೊನ್ನಾಳಿ ತಾಲ್ಲೂಕಿನಲ್ಲಿ ಬೆಂಕಿ

ಹಚ್ಚಿ, ಲಾಟಿಚಾರ್ಜ್ ಆಗಿ ದೊಡ್ಡ ಗೊಂದಲವುಂಟಾಗಿ ಅನೇಕ ಅನಾಹುತಗಳು ಆಗಿವೆ. ಇತ್ತೀಚೆಗೆ ನನಗೆ ಬಂದಂಥ ಸುದ್ದಿ ಪ್ರಕಾರ ನ್ಯಾಮತಿಯಲ್ಲಿ ಈಗಲೂ ಗಲಾಟೆ ನಡೆಯುತ್ತಿದೆ. ಅಲ್ಲಿ ಮನೆಮನೆಗೆ ನುಗ್ಗಿ ಹೆಣ್ಣುಮಕ್ಕಳನ್ನು ಎಳೆದಾಡಿ ಬಡಿದಾಡಿದಂಥ ಕೆಲಸಗಳು ಆಗಿವೆ. ಅನೇಕ ಕಡೆ ಬೆಂಕಿ ಹಚ್ಚಿರುವಂಥ ಕೆಲಸ ಆಗಿದೆ. ಕೆಲವರನ್ನು ಬಂಧನ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಆ ಜಿಲ್ಲೆಯವರಾದ್ದರಿಂದ ನಾನು ಅವರಿಗೆ ಹೊಸದಾಗಿ ತಿಳಿಸುವಂಥ ಅವಶ್ಯಕತೆಯಿಲ್ಲ. ಆ ಭಾಗದ ಬಹಳ ಜನರ ಬೇಡಿಕೆ ಏನೆಂದರೆ, ಹೊನ್ನಾಳಿ ತಾಲ್ಲೂಕು ಶಿವಮೊಗ್ಗಕ್ಕೆ ಸೇರಬೇಕು. ಎನ್ನುವುದು ಮುಖ್ಯವಾಗಿದೆ. ನಾವೆಲ್ಲ ಶಾಸಕರು ಅಲ್ಲಿಗೆ ಹೋಗಿದ್ದಾಗಲೂ ಅಲ್ಲಿಯ ಜನರು ಅದೇ ಅಭಿಪ್ರಾಯಪಟ್ಟರು. ಆದ್ದರಿಂದ ಅಲ್ಲಿಯ ಈಗಿನ ಸ್ಥಿತಿ ಏನೆಂಬುದನ್ನು ಸದನಕ್ಕೆ ಹೇಳಬೇಕು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಜಿಲ್ಲೆಗಳ ನಿರ್ಮಾಣ ಕಾರ್ಯವನ್ನು ಹೊಸದಾಗಿ ಮಾಡಿದ್ದೇವೆ. ಯಾವ ತಾಲ್ಲೂಕು ಯಾವ ಜಿಲ್ಲೆಯಲ್ಲಿ ಇರಬೇಕು ಎನ್ನುವುದರ ಬಗ್ಗೆ ನಾವು ಇನ್ನೂ ಬೇಕಾದರೆ ಕುಳಿತು ಪುನರ್‌ವಿಚಾರ ಮಾಡಿ, ಯಾವುದಾದರೂ ಸಣ್ಣಪುಟ್ಟ ಹೊಂದಾಣಿಕೆ ಮಾಡಬೇಕಾದರೆ ಕೆಲವು ಕಡೆ ತಾಲ್ಲೂಕುಗಳನ್ನು ಒಡೆಯಬೇಕಾದಂಥ ಪ್ರಸಂಗವೂ ಸಹ ಇದೆ. ಆದ್ದರಿಂದ ಅವು ಅಷ್ಟನ್ನೂ ತೆಗೆದುಕೊಂಡರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ದಯವಿಟ್ಟು ತಾವೆಲ್ಲಾ ಸಹಕರಿಸಬೇಕು. ಈಗ ಹೊನ್ನಾಳಿಯವರು, ಹರಪ್ಪನಹಳ್ಳಿಯವರು ಹೊಸ ದಾವಣಗೆರೆ ಜಿಲ್ಲೆಗೆ ಬರುವುದಿಲ್ಲವೆಂದು ಹೇಳುವುದು, ಸಿಂಧನೂರುನವರು ನಾವು ಕೊಪ್ಪಳಕ್ಕೆ ಹೋಗುವುದಿಲ್ಲವೆಂದು ಹೇಳುವುದು, ನರಗುಂದದವರು ನಾವು ಧಾರವಾಡಕ್ಕೆ ಹೋಗುವುದಿಲ್ಲವೆಂದು ಹೇಳುವುದು ಇವೆಲ್ಲಾ ನಡೆಯುತ್ತಿದೆ. ನಾವು ಈ ಜಿಲ್ಲೆಯ ವಿಂಗಡಣೆಗಳನ್ನು ಆಡಳಿತ ನಡೆಸುವ ಅನುಕೂಲಕ್ಕಾಗಿ ಜನರ ಅನುಕೂಲತೆ ದೃಷ್ಟಿಯಿಂದ ಮಾಡುತ್ತಿದ್ದೇವೆಯೇ ಹೊರತು ಜನರ ಅನಾನುಕೂಲಕ್ಕಾಗಿ ಯಾರೂ ಸಹ ಜಿಲ್ಲಾ ವಿಂಗಡಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಬೇಕಾದರೆ ಪುನಃ ಅಲ್ಲಿಯ ಪ್ರತಿನಿಧಿಗಳನ್ನು ಕರೆಸಿ ಕುಳಿತುಕೊಂಡು ಮಾತನಾಡಿ ಸಮಾಧಾನಕರವಾದ ತೀರ್ಮಾನವನ್ನು ತೆಗೆದುಕೊಳ್ಳೋಣ. ಆದ್ದರಿಂದ ಈಗ ಬೆಂಕಿ ಹಚ್ಚುವುದಾಗಲೀ ಬಸ್ಸುಗಳನ್ನು ಸುಡುವುದಾಗಲೀ ಇಂಥಹ ಕೆಲಸಗಳನ್ನು ಮಾಡದಿರುವ ಹಾಗೆ ಶ್ರೀ ಯಡಿಯೂರಪ್ಪನವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಅಲ್ಲಿಯ ಜನಗಳಿಗೆ ಹೇಳಬೇಕೆಂದು ಮಾನ್ಯ ಉಪಾಧ್ಯಕ್ಷರ ಮುಖಾಂತರ ಇವರೆಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಈ ಜಿಲ್ಲಾ ಪುನರ್‌ವಿಂಗಡಣೆ ಬಗ್ಗೆ ಮೊದಲನೇ ಹೆಜ್ಜೆಯನ್ನು ಇಟ್ಟಿದ್ದೇವಷ್ಟೇ. We have to face many problems regarding this. So. I appeal to you.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನ್ಯಾಮತಿಯಲ್ಲಿ ತುಂಬಾ ಗಲಾಟೆಯಾಗಿ ಪೋಲೀಸ್ ಲಾಟಿಚಾರ್ಜ್ ಆಗಿ ಹೊಡೆತಗಳು ಬಿದ್ದು ಹೊಡೆತ ತಿಂದವರನ್ನು ಆಸ್ಪತ್ರೆಗೆ ಸೇರಿಸುವುದಕ್ಕೂ ಸಹ ಹೊರಗಡೆ ಬರುವುದಕ್ಕೆ ಆಗುತ್ತಿಲ್ಲ. ಅಂಥ ಸಿಚ್ಯುಎಷನ್ ಅಲ್ಲಿ ಏರ್ಪಟ್ಟಿದೆ.

ಶ್ರೀ ಜೆ.ಹೆಚ್. ಪಟೇಲ್ : ಇಂಥ ಕಾರಣಕ್ಕೋಸ್ಕರ ಬೆಂಕಿ ಹಚ್ಚುವುದು, ಬಸ್ ಸುಡುವುದು ಮತ್ತು ರಸ್ತೆಗಳನ್ನು ಹಾಳುಮಾಡುವಂಥವರು, ಅವರು ಸಜ್ಜನರು ಅಲ್ಲ. ಯಾವುದೋ ಕಾರಣಕ್ಕೋಸ್ಕರ ಅವರು ಬಸ್ ಸುಡುತ್ತಾರೆ. ಇದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಈಗ ಏನಾಗುತ್ತದೆ ಎಂದರೆ ಸರ್ಕಾರದವರು ಸ್ವಲ್ಪ ಎಮೋಷನಲ್ ಇಷ್ಯೂ ಮಾಡುತ್ತಾರೆ. ಈ ಇಷ್ಯೂ ಮಾಡಿದಾಗ ರಾಜ್ಯದಲ್ಲಿ ಜನ ಏನು ಮಾಡುತ್ತಾರೆಂದರೆ, ಒಂದು ಗುಂಪು ಸೇರಿದಾಗ ಹೆಚ್ಚುಕಡಿಮೆ ಆಗುತ್ತದೆ. ನನಗೆ ಇತ್ತೀಚೆಗೆ ಮಾಹಿತಿ ಬಂದ ಪ್ರಕಾರ ಹೊನ್ನಾಳಿಯ ವಿಧಾನಸಭಾ ಸದಸ್ಯರನ್ನು ಸಹ ಅರೆಸ್ಟ್ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ನೀವು ಹಂತ ಹಂತವಾಗಿ ಯಾವ ರೀತಿ ಚಳುವಳಿ ಮಾಡಿದ್ದೀರಿ ಎಂಬುದು ನಮಗೆ ಗೊತ್ತಿದೆ. ಯಾರೋ ಒಬ್ಬರು ಬೆಂಕಿ ಹಾಕಿದರೂ ಎಂದರೆ ಅಲ್ಲಿಯ ಎಂ.ಎಲ್.ಎ ಅವರನ್ನು ಅರೆಸ್ಟ್ ಮಾಡಿದರೆ ಹೇಗೆ? ಇದರ ಬಗ್ಗೆ ಸ್ವಲ್ಪ ತಾವು ಪರಿಶೀಲಿಸಿ.

ಶ್ರೀ ಜೆ.ಹೆಚ್. ಪಟೇಲ್ : ನಾವು ಚಳುವಳಿಯನ್ನು ಮಾಡಿದ್ದುದು ಪ್ರಜಾತಂತ್ರವನ್ನು ಉಳಿಸುವುದಕ್ಕೆ. ನೀವು ಮಾಡುತ್ತಾ ಇರುವುದು ಪ್ರಜಾತಂತ್ರವನ್ನು ಕಳೆಯುವುದಕ್ಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಚಳುವಳಿ ಮಾಡಿರುವುದು ನಮಗೆ ಗೊತ್ತಿದೆ. ಅದರ ವ್ಯಾಖ್ಯಾನ ಈಗ ಬೇಡ ಅಲ್ಲಿಯ ಶಾಸಕರಾದ ಕೃಷ್ಣಮೂರ್ತಿಯವರನ್ನು ಅರೆಸ್ಟ್ ಮಾಡಿದ್ದಾರೆ. ಅವರನ್ನು ಬಿಡುಗಡೆ ಮಾಡಿ.

SRI. J.H. PATEL : The position there is quiet, calm now. I have hour to hour report.

SRI. M. MALLIKARJUNA KHARGE : He must be released.

SRI. J.H. PATEL : He had been released.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮುಖ್ಯ ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಕೆಲವು ತಾಲ್ಲೂಕುಗಳು ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಸೇರಿಸುವುದರ ಬಗ್ಗೆ ತಾವು ಕನ್ಸಿಡರ್ ಮಾಡುತ್ತಿದ್ದರೆ, ಅದಕ್ಕಾಗಿ ಇಲ್ಲಿ ಗೊಂದಲ ಬೇಡ ನಾವು ಕನ್ಸಿಡರ್ ಮಾಡುತ್ತೇವೆ ತಾವೆಲ್ಲರೂ ಶಾಂತಿಯಿಂದ ವ್ಯವಹರಿಸಿ. ಎಂದು ನೀವು ಒಂದು ಕರೆ ಕೊಟ್ಟರೆ ಅಲ್ಲಿ ಗಲಭೆ ನಿಲ್ಲುತ್ತದೆ ಇಲ್ಲದಿದ್ದರೆ ಅಲ್ಲಿ ಪೋಲೀಸರು ಅವರನ್ನೆಲ್ಲಾ ಸುಟ್ಟುಹಾಕಿ ಬಿಡುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಅದಕ್ಕೋಸ್ಕರವೇ ನಾನು ಇಲ್ಲಿ ಹೇಳುತ್ತಿರುವುದೇನೆಂದರೆ, ಅಲ್ಲಿ ವಿನಾಕಾರಣ ಶಾಂತಿಭಂಗ ಬೇಡ, ರ್ಯಾಷನಲ್ ಆಗಿ ಕುಳಿತು ಆಲೋಚನೆ ಮಾಡಿ ಮಾಡೋಣ. ಈಗ ಇದರಲ್ಲಿ ನನ್ನ ತಾಲ್ಲೂಕೂ ಸಹ ಒಂದು ಇದೆ. ಇದರಲ್ಲಿ ಒಂದು ಭಾಗ ಶಿವಮೊಗ್ಗಕ್ಕೆ ಹತ್ತಿರವಾಗುತ್ತದೆ. ನಾವೆಲ್ಲಾ ದಾವಣಗೆರೆಗೆ ಹತ್ತಿರದಲ್ಲಿದ್ದೇವೆ. ಆದರೂ

ಠ ಈಗ ಆ ವಿಷಯಗಳನ್ನೆಲ್ಲಾ ಪ್ರಸ್ತಾಪ ಮಾಡಿಕೊಂಡು ಕುಳಿತರೆ ಸರಿ ಹೋಗುವುದಿಲ್ಲ. ವಿರೋಧ ಕ್ಷದ ನಾಯಕರುಗಳನ್ನು ಅಥವಾ ಆ ಪ್ರದೇಶದ ಸಂಬಂಧಪಟ್ಟಂಥ ಮುಖಂಡರುಗಳನ್ನು ಕರೆದು ಳಿತು ಮಾತನಾಡಿ ಡಿಸೈಡ್ ಮಾಡೋಣ. ತಾಲ್ಲೂಕು ಬಗ್ಗೆ ಈಗ ಅಜಿಟೇಷನ್ ಯಾರೂ ಸಹ ನಾಡುವುದು ಬೇಡವೆಂದು ಮನವಿ ಮಾಡಿಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, 'ಮುಂದೆ ಜಿಲ್ಲಾ ವಿಂಗಡಣೆಗಳ ದಲಾವಣೆ ಬಗ್ಗೆ ನಾನು ಪ್ರಾಮಾಣಿಕವಾದ ಚಿಂತನೆಯನ್ನು ಮಾಡುತ್ತೇನೆ' ಎನ್ನತಕ್ಕಂಥ ಮಾತನ್ನು ನಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತು ಈ ಲ್ಲೆಗಳನ್ನು ಮಾಡಿರತಕ್ಕಂಥ ನಿರ್ಧಾರಕ್ಕೆ ನಮ್ಮ ಇಡೀ ಸದನವೇ ಪ್ರಾಮಾಣಿಕವಾಗಿ ಸ್ವಾಗತ ನಾಡಬೇಕು. ಏಕೆಂದರೆ ಇದು ಚರಿತ್ರಾರ್ಹವಾಗಿ ಇತಿಹಾಸದಲ್ಲಿ ಸೇರುವಂಥದ್ದಾಗಿದೆ. ಇದರಲ್ಲಿ ರಡನೇ ಅಭಿಪ್ರಾಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, "ಉಪ್ಪಿನವರು ಅಳುತ್ತಾರೆಂದು ೀಳಿ, ತೆಂಗಿನವರೂ ಅಳುತ್ತಿರುವ ಹಾಗೆ ಕಾಣುತ್ತದೆ." ಮಾನ್ಯ ವಾಟಾಳ್ ನಾಗರಾಜ್‌ರವರ ತ್ರವಾದ ಚಾಮರಾಜನಗರಕ್ಕೆ ಎಲ್ಲಾ ಮಾಡಿಕೊಟ್ಟಮೇಲೂ ಇವರದ್ದು ಈ ಗತಿ. ನಮ್ಮ ಕಡೆಯ ಲ್ಲೂಕಿಗೆ ಎಲ್ಲಾ ರೆಕಮಂಡೇಷನ್ ಆಗಿ, ಅಫಿಷಿಯಲ್ ರಿಪೋರ್ಟ್ ಬಂದರೂ ಕೂಡ ಮಾನ್ಯ ುಖ್ಯಮಂತ್ರಿಗಳು ಆ ಕಡೆಗೆ ಕಣ್ಣು ತೆರೆದು ನೋಡುತ್ತಿಲ್ಲ. ಇದು ಏಕೆ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರ ಜಿಲ್ಲೆಗೆ ನೂ ಮಾಡಿಲ್ಲವೆಂದು ಅವರು ಹೇಳುತ್ತಾರೆ. I don't want to impose anything. I want to ಂ this with the cooperation and affection. ಅವರ ಪ್ರೀತಿ ಮತ್ತು ಸಹಕಾರದಿಂದ ನಾಡಬೇಕೆಂದಿದ್ದೇನೆ. ನಿಮ್ಮ ಜಿಲ್ಲೆಗೆ ಸಂಬಂಧಪಟ್ಟಹಾಗೆ ಸಹ ನಾನು ಅನೌನ್ಸ್ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಮಗೆ ಏನು ಭಯ ಇದೆ ಎಂದರೆ, ದು ಜಿಲ್ಲೆ ಎಂದು ಡಿಕ್ಲೇರ್ ಆದ ತಕ್ಷಣ ತಾಲ್ಲೂಕನ್ನು ಒಡೆಯುವುದಕ್ಕೆ ಬರುವುದಿಲ್ಲ ಎನ್ನತಕ್ಕಂಥ ತುರ ಅವರಿಗೆ. ಆ ಮೇಲೆ ಇದನ್ನು ನೀವು ಕನ್ಸಿಡರ್ ಮಾಡುವುದಾದರೆ ಖಂಡಿತವಾಗಿ ಅದರ ಬಗ್ಗೆ ಲ್ಲರಿಗೂ ಚರ್ಚೆ ಮಾಡುವುದಕ್ಕೆ ಬರುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಚಾಮರಾಜನಗರ ತಾಲ್ಲೂಕನ್ನು ಈಗಾಗಲೇ ಜಿಲ್ಲೆ ಎಂದು ಮಾಡಿದ್ದಾರೆ. ಅಲ್ಲಿ ಎಲ್ಲಾ ಕೆಲಸ ಪ್ರಾರಂಭವಾಗಿದೆ. ಈಗ ನಿಮ್ಮ ಜಿಲ್ಲೆಯ ಲಸ ಆಗಿಹೋಗಿದೆ. ಈಗ ಅದನ್ನು ಏಕೆ ಪುನಃ ಪ್ರಸ್ತಾಪ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ನಾನು ಮಾತನಾಡಲೇ ಇಲ್ಲ. ಈ ತರಹ ಕೂಗಿದರೆ ಹೇಗೆ? ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ಈಗ ಮಾನ್ಯ ಸದಸ್ಯರಾದ ಯಾವಗಲ್‌ರವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಅವರೂ ಸಹ ಮಾತನಾಡಲಿ, ಅವರಿಗೆ ಮಾತನಾಡಲಿಕ್ಕೆ ಸಿಗುವ ಅವಕಾಶವನ್ನು ನಾನು ತಪ್ಪಿಸುವುದಕ್ಕೆ ಹೋಗುವುದಿಲ್ಲ... ನಾನು ಒಂದು ಅಭಿನಂದನೆಯನ್ನು ಅಲ್ಲ ಸಾವಿರ ಅಭಿನಂದನೆಯನ್ನು ಸರ್ಕಾರಕ್ಕೆ ಸಲ್ಲಿಸುತ್ತೇನೆ. ಅದರಲ್ಲೇನೂ ಹಿಂದುಮುಂದು ನೋಡುವುದಿಲ್ಲ ಯಾವುದೇ ಒಂದು ಸಣ್ಣ ಗೊಂದಲವೂ ಸಹ ನಮ್ಮ ಚಾಮರಾಜನಗರವನ್ನು ಜಿಲ್ಲೆಯನ್ನಾಗಿ ಮಾಡಿದ್ದುದರಲ್ಲಿ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯನ್ನು ಮೊದಲ ಉದ್ಘಾಟನೆ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಆ ಊರಿಗೇ ಹೋಗುವುದಿಲ್ಲ ಅಲ್ಲಿ ಮಹದೇಶ್ವರ ಬೆಟ್ಟ ಇದೆ ಮತ್ತು ಆ ಪ್ರದೇಶ ವೀರಪ್ಪನ್ ತಾಣಕ್ಕೆ ಸಮೀಪವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾವು ನಮ್ಮ ಜಿಲ್ಲೆಗೆ ಮಾನ್ಯ ಜೆ.ಹೆಚ್ ಪಟೇಲರನ್ನು ಕರೆದುಕೊಂಡು ಖಂಡಿತಾ ಹೋಗುತ್ತೇವೆ. ಅದರಲ್ಲಿ ಏನೂ ಅನುಮಾನ ಇಲ್ಲ. ಆದರೆ ಆ ಸಂದರ್ಭದಲ್ಲಿ ಅವರ ಭಾವನೆ ಏನು ಇದೆಯೆಂದರೆ, ಈ 7 ಜಿಲ್ಲೆಗಳನ್ನು ಉದ್ಘಾಟನೆ ಮಾಡುವಾಗ ಪ್ರಾರಂಭದಲ್ಲಿ ಆ ಜಿಲ್ಲೆಯ ದೇವರ ದರ್ಶನವನ್ನು ಮಾಡಿ ಆಶೀರ್ವಾದ ಪಡೆಯೋಣ ಎನ್ನುವ ಉದ್ದೇಶವೇ ಹೊರತು ಬೇರೆ ಏನೋ ಇದೇ ಎನ್ನತಕ್ಕಂಥ ಭಾವನೆ ಬೇಕಾಗಿಲ್ಲ. ಈಗ ಕೆಲವು ಪತ್ರಿಕೆಗಳವರು - ಚಾಮರಾಜನಗರಕ್ಕೆ ಉಪಮುಖ್ಯಮಂತ್ರಿಗಳು ಹೋಗುವುದಿಲ್ಲ, ಮಂತ್ರಿಗಳು ಹೋಗುವುದಿಲ್ಲ ಎಂದು ಏನೇನೋ ಬರೆಯುತ್ತಿದ್ದಾರೆ. ಆದರೆ ಅಂಥದ್ದು ಏನೂ ಆಗಿಲ್ಲ. ಮುಂದೆ ಮುಖ್ಯ ಮಂತ್ರಿಯಾದ ನಂತರ ಮೊದಲು ಶ್ರೀ ಜೆ.ಹೆಚ್. ಪಟೇಲ್‌ರನ್ನು ನಮ್ಮ ಊರಿಗೆ ಕರೆದುಕೊಂಡು ಹೋಗುತ್ತೇನೆ, ಬೇಕಾದ್ದು ಆಗಿ ಹೋಗಲಿ. ಬೇರೆ ಮಾತು ಇಲ್ಲವೇ ಇಲ್ಲ.

ಶ್ರೀ ಜಿ.ಎಂ. ಮೊಹಿದ್ದೀನ್ : ಒಂದು ಯಾಗವನ್ನು ಮಾಡಿಸಿ, ಬೇಕಾದರೆ ವಸಂತ ಬಂಗೇರರವರು ಮಾಹಿತಿಯನ್ನು ಅದರ ಬಗ್ಗೆ ಕೊಡುತ್ತಾರೆ.

ಶ್ರೀ ಜಿ.ಆರ್. ಯಾವಗಲ್ : ಮಾನ್ಯ ಉಪಾಧ್ಯಕ್ಷರೆ, ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ ಆದರೆ ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಲೇ ಇದ್ದಾರೆ ನನಗೆ ಅವಕಾಶವನ್ನೇ ಕೊಡುತ್ತಿಲ್ಲ. ಮೊಟ್ಟ ಮೊದಲನೆಯದಾಗಿ ನಾವುಗಳೆಲ್ಲರೂ ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇವೆ. ಬಹಳ ವರ್ಷಗಳ ನಂತರ ಒಂದು ದೊಡ್ಡ ಕೆಲಸವನ್ನು ಮಾಡಿದ್ದಾರೆ. ಹೊಸದಾಗಿ ಜಿಲ್ಲೆಗಳನ್ನು ಮಾಡಿ ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಪದೇ ಪದೇ ಪರಿಶೀಲನೆಯನ್ನು ಮಾಡುತ್ತೇವೆಂದು ಹೇಳುತ್ತಾರೆ. ಅದನ್ನು ದಯವಿಟ್ಟು ಬಿಟ್ಟು ಬಿಡಿ. ನೀವು ಎಷ್ಟೆಷ್ಟು ಹೇಳುತ್ತಾ ಹೋಗುತ್ತೀರಿ ಅಷ್ಟು ಅಷ್ಟು ಗಲಭೆ, ಗಲಾಟೆಗಳಾಗುತ್ತದೆ. ನೀವು ಏನಾದರೂ ಕೆಟ್ಟ ಕೆಲಸವನ್ನು ಮಾಡಿಲ್ಲ. ಇವತ್ತು ಅಲ್ಲಿ ಇರಬಹುದು ಮುಂದೆ ಬೇರೆಯಾಗಬಹುದು. ಮಾಡುತ್ತೇವೆಂದು ತಮ್ಮ ಏನು ದೃಢ ನಿರ್ಧಾರ ಇದೆ ಇದನ್ನು ಮತ್ತೆ ಹೇಳಿ ಮುಂದೆ ಯಾವುದೂ ಆಗುವುದಿಲ್ಲವೆಂದು

ೀಳಿ. ಈ ರೀತಿಯಾದಂತಹ ನಿಲುವು ಬರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ೀಳುವುದೇನೆಂದರೆ ತಾವುಗಳು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಎಂದು ಪದೇ ಪದೇ ಹೇಳುತ್ತಲೇ ುರುತ್ತೀರಿ, ಆದರೆ ನಿಮ್ಮ ಪಕ್ಷದ ಮುಖಂಡರುಗಳು ಪ್ರಚೋದನೆಯನ್ನು ಮಾಡುವಂತಹ ಕೆಲಸಕ್ಕೆ ್ಲಪ ಬುದ್ಧಿವಾದವನ್ನು ಹೇಳಿ, ಗಲಭೆಗಳನ್ನು ನಿಲ್ಲಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಜಿಲ್ಲೆಯ ಂಚಿಕೆಯಲ್ಲಿ ಕೆಲವು ತಾಲ್ಲೂಕು ಈ ಕಡೆ ಆ ಕಡೆ ಹೋಗಿರಬಹುದು. ಜನ ಪ್ರತಿನಿಧಿಗಳು ಬಂದು ೀಳಿರಬಹುದು ಅದನ್ನೇ ಒಂದು ಇಷ್ಯೂ ಮಾಡಿಕೊಂಡು ರಾಜಕೀಯ ಬೆರಸುವುದನ್ನು ನಿಲ್ಲಿಸಬೇಕೆಂದು ಿಯಮಾಡಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10.00 ಂಟೆಗೆ ಮತ್ತೆ ಸಮಾವೇಶಗೊಳ್ಳುವುದು.

(ಸದನವು ಸಂಜೆ 6.52 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 13-08-1997 ಬೆಳಿಗ್ಗೆ 0.00 ಗಂಟೆಗೆ ಸೇರಲು ನಿಶ್ಚಯಿಸಿತು) :

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ೂಚಿಸುತ್ತದೆ)